ಮಳೆ ಪರಿಹಾರದಡಿ ಹಣ ಬಿಡುಗಡೆ

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೦ (೨೩೬೫)

ಸದಸ್ಯರ ಹೆಸರು : ಶ್ರೀ ಬೋಪಯ್ಯ ಕೆ.ಜಿ (ಮಡಿಕೇರಿ)

ಉತ್ತರಿಸುವವರು : ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಕೊಡಗು ಜಿಲ್ಲೆಯಲ್ಲಿ ಶಾಸಕರ ನೇತೃತ್ವದ ತಾಲ್ಲೂಕು ಅನುಷ್ಠಾನ ಸಮಿತಿಯನ್ನು ರಚಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ ಜಿಲ್ಲಾಡಳಿತಕ್ಕೆ ಮಾಹಿತಿ ಒದಗಿಸಲಾಗಿದೆಯೇ ;

ಇ) ಶಾಸಕರ ನೇತೃತ್ವದ ತಾಲ್ಲೂಕು ಅನುಷ್ಠಾನ ಸಮಿತಿಯ ಶಿಫಾರಸ್ಸಿನಂತೆ ಕೈಗತ್ತಿಕೊಂಡಿರುವ ಕಾಮಗಾರಿಗಳಷ್ಟು (ತಾಲ್ಲೂಕುವಾರು ವಿವರ ನೀಡುವುದು) ?

ಈ) ೨೦೦೬-೦೭ನೇ ಸಾಲಿನಲ್ಲಿಇ ಕೊಡಗು ಜಿಲ್ಲೆಗೆ ಬಿಡುಗಡೆ ಮಾಡಲಾದ ಮಳೆ ಪರಿಹಾರದ ಹಣ ಎಷ್ಟು ?

ಉ) ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆಯಿಂದ ಆದ ನಷ್ಟ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಊ) ಬಿಡುಗಡೆಯಾದ ಹಣದಲ್ಲಿ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ;

ಎ) ಯಾವ ಯಾವ ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಾಗಿದೆ (ವಿವರ ನೀಡುವುದು) ;

ಉತ್ತರ

ಅ) ರಚಿಸಲಾಗಿದೆ.

ಆ) ಹೌದು, ಮಾಹಿತಿ ಒದಗಿಸಿದೆ.

ಇ) ಶಾಸಕರ ನೇತೃತ್ವದ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಉಸ್ತುವಾರಿ ಸಮಿತಿ (ಬರಪರಿಹಾರ) ಯನ್ನು ಸರ್ಕಾರವು ದಿನಾಂಕ : ೧೦-೧೦-೨೦೦೬ ಆದೇಶದಲ್ಲಿ ರಚಿಸಿರುತ್ತದೆ. ಅದರ ಇದಕ್ಕೂ ಮೊದಲೇ ಕೊಡಗು ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ಆಗಿರುವ ಸಾರ್ವಜನಿಕ ಆಸ್ತಿ ವಾಸ್ತಿಗಳಿಗೆ ಸಂಬಂಧಿಸಿದಂತೆ ತುರ್ತು ಪರಿಹಾರ ಕೈಗೊಳ್ಳುವ ಸಲುವಾಗಿ ಕೈಗೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸರ್ಕಾರವು ದಿನಾಂಕ ೭.೯.೨೦೦೫ರಲ್ಲಿ ರಚಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ನೇತೃತ್ವದ ಸಮಿತಿಯಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಈ) ೨೦೦೬-೦೭ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರಕ್ಕೆ ರೂ. ೫೧೯.೬೬ ಲಕ್ಷ ಅನುದಾನ ಬಿಡುಗಡೆ ಮಾಡಿದೆ.

ಜಿಲ್ಲೆಯಲ್ಲಿ ಆಗಿರುವ ನಷ್ಟ (ರೂ. ಲಕ್ಷಗಳಲ್ಲಿ) ತಾಲ್ಲೂಕುವಾರು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ವಿವರ	ಮಡಿಕೇರಿ	ವಿರಾಜಪೇಟೆ	ಸೋಮವಾರ ಪೇಟೆ	ಒಟ್ಟು
೧	(ಖಾಸಗಿ ಆಸ್ತಿ ಪಾಸ್ತಿ) ಮಾನವ/ಜಾನುವಾರು/ ಪ್ರಾಣಿಹಾನಿ ವಾಸದ ಮನೆಗಳಿಗೆ ಹಾನಿ, ಬೆಳೆಗಳಿಗೆ ಆದ ಹಾನಿ	೩೮೫.೮೪	೨೭೩.೯೭	೮೫೯.೯೦	೧೫೧೯.೭೧
೨	ಸಾರ್ವಜನಿಕ ಆಸ್ತಿಪಾಸ್ತಿ ಹಾನಿ	೯೮೦.೬೫	೮೩೦.೬೫	೧೨೧೪.೩೫	೩೦೨೫.೬೫
೩.	ಮೆಸ್ಕಾಂ ಇಲಾಖಾ ಹಾನಿ (ಜಿಲ್ಲೆಗೆ ಸಂಬಂಧಿಸಿದಂತೆ)	-	-	-	೨೯.೪೧
	ಒಟ್ಟು	೧೩೬೬.೪೯	೧೧೦೪.೬೨	೨೦೭೪.೨೫	೪೫೭೫.೭೭

ಪ್ರಸಕ್ತ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಇದೂವರೆಗೆ ಒಟ್ಟು ೧೨೮೭ ಪ್ರಕರಣಗಳಲ್ಲಿ ಒಟ್ಟಾಗಿ ರೂ. ೧೪೦.೪೩ ಲಕ್ಷ ಪರಿಹಾರ ಮಂಜೂರು ಮಾಡಲಾಗಿದೆ.

ಪರಿಹಾರ ನೀಡಿದ ವಿವರಗಳು ಕೆಳಕಂಡಂತಿರುತ್ತದೆ. (ರೂ. ಲಕ್ಷಗಳಲ್ಲಿ)

	ಪ್ರಕರಣಗಳು	ನೀಡಿರುವ ಪರಿಹಾರ
ಮಾನವ ಜೀವಹಾನಿ	೮	೮.೦೦
ಜಾನುವಾರುಹಾನಿ	೩೮	೧.೮೩
ಮನೆಹಾನಿ ಪರಿಹಾರ	೧೦೮೨	೧೯.೮೫
ಕೃಷಿ ಭೆಳೆಹಾನಿ ಪರಿಹಾರ	೨೦೫೮	೧೨.೯೪
ತೋಟಗಾರಿಕೆ ಬೆಳೆಹಾನಿ ಪರಿಹಾರ	೯೬೯೩	೯೭.೮೧
ಒಟ್ಟು	**೧೨೮೭೯**	**೧೪೦.೪೩**

ಉ) ೨೦೦೬-೦೭ ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ೩ ತಾಲ್ಲೂಕುಗಳಲ್ಲಿ ಬಾರೀ ಮಳೆಯಿಂದ ಹಾನಿಗೊಳಗಾದ ರಸ್ತೆ ದುರಸ್ತಿ ಮೋರಿ ನಿರ್ಮಾಣ, ತಡೆಗೋಡೆ ನಿರ್ಮಾಣ ಸರ್ಕಾರಿ ಕಟ್ಟಡ ದುರಸ್ತಿ ಸಣ್ಣ ನೀರಾವರಿ ಪಿಕ್ ಅಪ್ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗಿದೆ.

ಶ್ರೀ ಕೆ.ಜಿ.. ಬೋಪಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಈ ಉತ್ತರವನ್ನು ನೋಡಿದರೆ ಇದು ನೇರವಾಗಿ ಶಾಸಕರಿಗೆ ಮಾಡಿದಂತಹ ಅಪಮಾನ ಮತ್ತು ನಮ್ಮ ಹಕ್ಕುಚ್ಯುತಿ ಬರುವಂತಹ ರೀತಿಯಲ್ಲಿ ಇವತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಾನು ಶಾಸಕರ ಸಮಿತಿಯ ಬಗ್ಗೆ ಕೇಳಿದ್ದಕ್ಕೆ ರಚಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ (ಆ) ಪ್ರಶ್ನೆಗೆ ಹೌದು ಮಾಹಿತಿ ಒದಗಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ (ಇ) ಪ್ರಶ್ನೆಗೆ ಇವರ ಉತ್ತರ ಹೇಗಿದೆ ಎಂದರೆ, ಶಾಸಕರ ನೇತೃತ್ವದ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಉಸ್ತುವಾರಿ ಸಮಿತಿ ಬರಪರಿಹಾರವನ್ನು ಸರ್ಕಾರವು ೧೦-೧೦-೨೦೦೬ ರ ಆದೇಶದಲ್ಲಿ ರಚಿಸಿರುತ್ತದೆ. ಆದರೆ ಇದಕ್ಕೂ ಮೊದಲು ಕೊಡಗು ಜಿಲ್ಲೆಯಲ್ಲಿ ನೆರೆಹಾವಳಿಯಿಂದ ಆಗಿರುವ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ತುರ್ತು ಪರಿಹಾರ ಕೈಗೊಳ್ಳುವ ಸಲುವಾಗಿ ಕೈಗೊಳ್ಳಬೇಕಾದ ಕಾಮಗಾರಿ ಕ್ರಿಯಾ ಯೋಜನೆಯನ್ನು ಸರ್ಕಾರವು ದಿನಾಂಕ : ೧೬-೦೯-೨೦೦೫ರಲ್ಲಿ ರಚಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ

ನೇತೃತ್ವದಲ್ಲಿ ಸಮಿತಿಯಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ತಾಲ್ಲೂಕು ಮಟ್ಟದ ಸಮಿತಿಯ ಶಿಫಾರಸ್ಸಿನ ಅನ್ವಯ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. ೨೦೦೫ರದ್ದನ್ನು ಇಲ್ಲಿ ಹೇಳುತ್ತಾರೆ. ೨೦೦೬–೦೭ರಲ್ಲಿ ಏನಾಗಿದೆ ಪರಿಸ್ಥಿತಿ, ಅದಕ್ಕೆ ಇವರಿಂದ ಯಾವುದೇ ಉತ್ತರವು ಇಲ್ಲ. ಕೊನೆಗೆ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ೨೦೦೬ರಲ್ಲಿ ಎಂದು ಕೇಳಿದರೆ, ಇವರ ಉತ್ತರವೇನೆಂದರೆ, ೨೦೦೬–೦೭ರಲ್ಲಿ ಕೊಡಗು ಜಿಲ್ಲೆಯ ೩ ತಾಲ್ಲೂಕುಗಳಲ್ಲಿ ಭಾರಿ ಮಳೆಯಿಂದಾಗಿ ಹಾನಿಗೊಳಗಾದ ರಸ್ತೆ ದುರಸ್ತಿ, ಮೋರಿ ನಿರ್ಮಾಣ, ತಡೆಗೋಡೆ ನಿರ್ಮಾಣ, ಸರ್ಕಾರಿ ಕಟ್ಟಡ ದುರಸ್ತಿ, ಸಣ್ಣ ನೀರಾವರಿ ಪಿಕಪ್ ದುರಸ್ತಿ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನುಷ್ಠಾನ ಸಮಿತಿಯು ಇದೆ ಎಂದು ಕೇಳಿದರೆ ಇಲ್ಲವೆಂದು ಹೇಳುತ್ತಾರೆ. ಇದರಲ್ಲಿ ನಾನು ನೇರವಾಗಿ ಆರೋಪವನ್ನು ಮಾಡುತ್ತಿದ್ದೇನೆ. ಆ ಕಂದಾಯ ಇಲಾಖೆಯಲ್ಲಿರುವಂತಹ ಪ್ರಧಾನ ಕಾರ್ಯದರ್ಶಿಗಳು ಜಿಲ್ಲೆಗೆ ಒಂದು ರೀತಿಯ ಸವಾಲನ್ನು ಹಾಕುವಂತಹ ಕೆಲಸವನ್ನು ಕಳೆದ ೬ ತಿಂಗಳಿಂದ ಮಾಡುತ್ತಿದ್ದಾರೆ. ಇವರು ಯಾವ ರೀತಿಯಾಗಿ ಮಾಡುತ್ತಿದ್ದಾರೆಂದರೆ ನಮ್ಮ ಸ್ವಾಭಿಮಾವನ್ನು ನಾವು ಕೊಡಗಿನಲ್ಲಿರುವಂತಹ ಎಲ್ಲಾ ಆಸ್ತಿಯು ಅರಣ್ಯದ್ದು ಅದು ಸರ್ಕಾರದ್ದು. ಯಾರೋ ಒಬ್ಬರು ಡೆಲಿಗೇಷನ್ ಹೋದರೆ ಈ ರೀತಿಯಾದಂತಹ ಉತ್ತರವನ್ನು ಕೊಡಬಹುದೇ ಅಧ್ಯಕ್ಷರೇ?..

ಅಧ್ಯಕ್ಷರು : ಮಾನ್ಯ ಬೋಪಯ್ಯನವರೇ, ತಾವು ಪ್ರಶ್ನೆಯನ್ನು ಕೇಳಬೇಕು. ನೀವು ಈ ರೀತಿಯಾಗಿ ಭಾಷಣವನ್ನು ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೇ ಮಾನ್ಯ ಬೋಪಯ್ಯನವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರು ಮಳೆ ಪರಿಹಾರದ ಬಗ್ಗೆ ಹಣವನ್ನು ಕೇಳಿದ್ದಾರೆ. ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಟ್ಟಿರುವುದು ಸಮಂಜಸವಾಗಿಲ್ಲ . ಇಲ್ಲಿ ಶಾಸಕರ ಸಮಿತಿಯನ್ನು

ರಚಿಸಲಾಗಿದೆ ಎಂದು ಹೇಳುತ್ತಾರೆ. ಮತ್ತು ಮಾಹಿತಿಯನ್ನು ಜಿಲ್ಲಾಡಳಿತವು ಕೊಟ್ಟಿದೆ ಎಂದು ಸಹ ಹೇಳುತ್ತಿದ್ದಾರೆ. ಆದರೆ ಇಲ್ಲಿ ಬರಪರಿಹಾರ ಹಿಂದೆ ಇದ್ದಾಗ ೨ ವರ್ಷಗಳ ಹಿಂದೆ ಕುಂಭದ್ರೋಣ ಮಳೆ ಕೊಡಗು ಜಿಲ್ಲೆಯಲ್ಲಿ ಆಗಿರುವುದರಿಂದ ಅದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ನಮ್ಮ ಕೊಡಗು ಜಿಲ್ಲೆಗೆ ಆಗಿರುವಂತಹ ಒಟ್ಟು ನಷ್ಟ ೪೫೫.೭೪ ಕೋಟಿ ರೂಪಾಯಿಗಳೂ ಆಗಿದೆ. ಮಾನ್ಯ ಧರ್ಮಸಿಂಗ್‌ರವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ೨೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಜಿಲ್ಲಾಡಳಿತವು ಶಾಸಕರ ಸಮಿತಿ ರಚನೆಯಾಗಿದ್ದರೂ ಕೂಡ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಕೇವಲ ೧೫ ಕೋಟಿ ರೂಪಾಯಿಗಳು ಮಾತ್ರ ಖರ್ಚು ಮಾಡಿದರು.

ಅಧ್ಯಕ್ಷರು : ಈ ರೀತಿಯಾಗಿ ಪ್ರಶ್ನೆಯನ್ನು ಡಿಟೇಲ್ ಆಗಿ ಕೇಳುತ್ತಾ ಹೋದರೆ ಹೇಗೆ ?

ಶ್ರೀ ಬಿ.ಎ. ಜೀವಿಜಯ : ಕಳೆದ ಸಾರಿ ಕೇಂದ್ರ ಸರ್ಕಾರದಿಂದ ೨೫೦ ಕೋಟಿ ರೂಪಾಯಿಗಳು ಬಂತು. ನನಗೆ ೫ ಕೋಟಿ ರೂಪಾಯಿಗಳು ...

ಶ್ರೀ ಕೆ.ಜಿ. ಬೋಪಯ್ಯ : ಜಿಲ್ಲೆಯಲ್ಲಿ ಆ ಬಗ್ಗೆ ಕೇಳುವುದಕ್ಕೆ ಹೋದರೆ ಕಂದಾಯ ಇಲಾಖೆಯ ಅಧಿಕಾರಿಗಳು ಉದ್ಧಟತನದ ಮಾತುಗಳನ್ನು ಆಡುತ್ತಾರೆ.

ಶ್ರೀ ಬಿ.ಎ. ಜೀವಿಜಯ : Diaster Management ಕಾರ್ಯದರ್ಶಿಯವರನ್ನು ನಾನು contact ಮಾಡಿದಾಗ you cannot digest ಎಂದು ಹೇಳುತ್ತಾರೆ. ಏಕೆ ಈ ಮಾತನ್ನು ಹೇಳಿದೆ ಎಂದರೆ, ಅಲ್ಲಿ ಜಿಲ್ಲಾಡಳಿತ ನಿಮಗೆ ಹಣವನ್ನು ಕೊಟ್ಟರೂ ಕೂಡ ಖರ್ಚು ಮಾಡುವುದಿಲ್ಲವೆನ್ನುವಂತಹ ಅರ್ಥದಲ್ಲಿ ಆ ಮಾತನ್ನು ಹೇಳಿದರು. ಆದ್ದರಿಂದ ಅಲ್ಲಿ ಜಿಲ್ಲಾಡಳಿತ ಯಾರು Deputy Commissioner ಇದ್ದಾರೆ ಅವರು ಎಷ್ಟು ಅಹಂಕಾರದಿಂದ ಅವರ ವರ್ತನೆಯ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್ ರವರಿಗೆ, ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಗೊತ್ತಿದೆ. ಅದನ್ನು ನಾನು ಈ ದಿವಸ ಹೇಳಬೇಕಾಗಿದೆ. ಈ ದಿವಸ ನಮ್ಮನ್ನು ಅವರು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಸರ್ವಾಧಿಕಾರಿಯಂತೆ ಆಡಳಿತವನ್ನು ನಡೆಸುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಅವರನ್ನು suspend ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಎಲ್ಲಾ ವಿಚಾರಗಳನ್ನು ಎತ್ತಿಕೊಂಡು ಏತಕ್ಕೆ ಮಾತನಾಡುತ್ತೀರಿ ?

ಶ್ರೀ ಬಿ.ಎ.ಜೀವಿಜಯ : ಇದು ಸಮರ್ಪಕವಾಗಿಲ್ಲ ಮತ್ತು ಸರಿಯಾಗಿರುವುದಿಲ್ಲ. ಆದ್ದರಿಂದ ಇದನ್ನು ಯಾವ ರೀತಿಯಾಗಿ ಸರಿಪಡಿಸಬೇಕೆಂದು ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಅಧ್ಯಕ್ಷರು : ಮಾನ್ಯ ಸಚಿವರು, ಪರಿಹಾರವನ್ನು ಕೊಡುವುದರ ಬಗ್ಗೆ ಉತ್ತರವನ್ನು ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ ಈ ಪ್ರಕೃತಿ ವಿಕೋಪ ಉಸ್ತುವಾರಿಯ ಸಮಿತಿಯ ಬಗ್ಗೆ ಅವರು ಕೇಳಿದ್ದಾರೆ. ಇದಕ್ಕಿಂತಲೂ ಮುಂಚೆ ೧೬-೦೯-೨೦೦೫ರಂದು ಆ ಒಮದು ಜಿಲ್ಲೆಗೆ ಸಂಬಂಧಪಟ್ಟಂತೆ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇತ್ತು. ೧೦-೧೦-೨೦೦೬ರಂದು ಹೊಸದಾಗಿ ನಾವು ಒಂದು ಅಧಿಸೂಚನೆಯನ್ನು ಹೊರಡಿಸಿ ಶಾಸಕರ ಅಧ್ಯಕ್ಷತೆಯಲ್ಲಿ ಈ ಒಂದು ಪ್ರಕೃತಿ ವಿಕೋಪದ ಬಗ್ಗೆ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ. ಅಲ್ಲಿಂದ ಶಾಸಕರ ಅಧ್ಯಕ್ಷತೆಯಲ್ಲಿ ಏನು action plan ನ್ನು ಕೊಡುತ್ತಾರೆ. ಅದರ ಪ್ರಕಾರ ಮಾಡುವಂತಹದ್ದು ಆಗಿದೆ. ಹಿಮದೆ ಏನು ಕಾಮಗಾರಿಗಳು ಇದ್ದವು ೧೬-೦೯-೨೦೦೫ರ ಅಧಿಸೂಚನೆಯ ಪ್ರಕಾರ ಅದು ಅನುಮೋದನೆಯು ಕೂಡ ಆಯಿತು. ಆದರೆ ನಂತರ ಈ ಹೊಸ ಸಮಿತಿಗಳು ಏನು ಶಾಸಕರ ನೇತೃತ್ವದಲ್ಲಿ ಆಗಿದೆ, ಇವತ್ತು ಎಲ್ಲಾ ಕಡೆಗಳಿಂದಲೂ ಈ ರೀತಿಯ ಸಮಿತಿಗಳು ಇದೆ. ಅದರ ಪ್ರಕಾರ ಇವತ್ತು ಶಾಸಕರ ಅಧ್ಯಕ್ಷತೆಯಲ್ಲಿ ಏನು ಈ ಕಾಮಗಾರಿಗಳನ್ನು action plan ಪ್ರಕಾರ ಕೊಡುತ್ತಾರೆ, ಅದನ್ನು ನಾವು approval ಮಾಡುವಂತಹದ್ದು, ಅನುಷ್ಠಾನ ಮಾಡುವುದು ನಡೆಯುತ್ತದೆ. ಹಾನಿಯ ಬಗ್ಗೆ ಇನ್ನಿತರ ವಿಷಯದ ಬಗ್ಗೆ ಮಾನ್ಯ ಬೋಪಯ್ಯನವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಪ್ರತ್ಯೇಕವಾಗಿ ವಿಶೇಷವಾಗಿ ಸೂಚನೆಯನ್ನು ಮಾಡಿದರೆ ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯನ್ನು ಮಾಡೋಣ. ಈ ವಿಷಯಕ್ಕೆ ಸಂಬಂಧಪಟತೆ ಶಾಸಕರ ಅಧ್ಯಕ್ಷತೆಯಲ್ಲಿ ಇರುವಂತಹದ್ದು ಶಾಸಕರಿಗೆ ಅಪಮಾನ ಮಾಡುವಂತಹ ಕೆಲಸವನ್ನು ನಾವು

ಏನೂ ಮಾಡುತ್ತಿಲ್ಲ. ನಾವು ಇದಕ್ಕಾಗಿ ೫೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಒಟ್ಟು ೫೫ ಕೋಟಿ ೧೯ ಲಕ್ಷ ರೂಪಾಯಿಗಳನ್ನು ಈ ಒಂದು ಅತಿವೃಷ್ಟಿಗೆ ಬಿಡುಗಡೆ ಮಾಡಿದ್ದೇವೆ. ಇನ್ನು ಜಿಲ್ಲಾಧಿಕಾರಿಗಳ ಹತ್ತಿರ ೧ ಕೋಟಿ ೯೦ ಲಕ್ಷ ರೂಪಾಯಿಗಳ ಹಣ ಇದೆ. ಅಲ್ಲಿ ಯಾವ ಯಾವ ಮಹತ್ವದ ಕೆಲಸಕಾರ್ಯಗಳು ಇವೆ, ಅದನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಅಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಇರುವಂತಹದ್ದು ಅವರು ಸೂಚನೆಯನ್ನು ಕೊಟ್ಟ ಪ್ರಕಾರ ಮಾಡುವಂತೆ ನಾವು ನೋಡಿ ಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಈ ತರಹ ಮಾಡುವುದಕ್ಕೆ ಬರುವುದಿಲ್ಲ. ಬೇರೆ ಸೂಚನೆಯನ್ನು ಕೊಡಿ ಆಗ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು : ಈ ವಿಚಾರದಲ್ಲಿ ಸದನಕ್ಕೆ ನಾವು ಸತ್ಯವನ್ನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಎಂ.ಪಿ. ಕುಮಾರಸ್ವಾಮಿಯವರನ್ನು ನಾನು ಕರೆದಿದ್ದೇನೆ. ಈ ಪ್ರಶ್ನೆ ಮುಗಿದಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಜಿ.ಬೋಪಯ್ಯ, ಶ್ರೀ ಹೆಚ್. ಡಿ ಬಸವರಾಜು, ಶ್ರೀ ಬಿ.ಎ. ಜೀವಿಜಯರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : ನೀವು ಈ ರೀತಿ ಮಾಡಿದರೆ ಹೇಗೆ ? ಗಲಾಟೆ ಮಾಡಬೇಡಿ. ಶ್ರೀ ಬಸವರಾಜ್ ನೀವುಗಳು ವೆಲ್‌ಗೆ ಬರಬಾರದಾಗಿತ್ತು, ಪ್ರಶ್ನೋತ್ತರ ಕಾಲದಲ್ಲಿ ಉಪ ಪ್ರಶ್ನೆಗಳನ್ನು ಒಂದೋ ಎರಡೋ ಕೇಳಬೇಕಾಗುತ್ತದೆ, ಅದನ್ನು ಬಿಟ್ಟು ಈ ರೀತಿ ಮಾಡಿದರೆ ಹೇಗೆ ನೀವು? ಬೋಪಯ್ಯನವರೇ ಈಗ ಜಗದೀಶ್ ಶೆಟ್ಟರ್‌ರವರು ನಿಮ್ಮ ಭಾಗಕ್ಕೆ ಸೇರಿದ ಮಂತ್ರಿಗಳು, ನೀವು ಹೋಗಿ ಕುಳಿತುಕೊಂಡು ಮಾತನಾಡಿ ಪರಿಹಾರ ಮಾಡಕೊಳ್ಳಬಹುದು. ತಾವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ವಿವರವಾದ ಚರ್ಚೆಗೆ ಅವಕಾಶವಿಲ್ಲ, ದಯಮಾಡಿ ನೀವು ನಿಮ್ಮ ಸ್ಥಳಗಳಿಗೆ ಹೋಗಿ, ಬೇರೆ ಯಾವುದಾದರೂ ಒಂದು ರೂಪದಲ್ಲಿ ನೀವು ಸೂಚನೆ ಕೊಡಿ. ಚರ್ಚೆಗೆ ಅವಕಾಶ ಕೊಡುತ್ತೇನೆ. ಆದರೆ ನೀವು ಪ್ರಶ್ನೋತ್ತರ ಕಾಲದಲ್ಲಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ದಯಮಾಡಿ ನಿಮ್ಮ ಸ್ಥಳಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಆಯಿತು, ನಿಮ್ಮ ಸ್ಥಳಗಳಿಗೆ ಹೋಗಿ ದಯಮಾಡಿ. ಈಗ ಜಗದೀಶ ಶೆಟ್ಟರ್ ರವರೇ ನೋಡಿ ನಮ್ಮ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲವೆಂದು ಮಾನ್ಯ ಶಾಸಕರು ಹೇಳುತ್ತಿದ್ದಾರೆ, ನೀವು ಅದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಶಾಸಕರ ನೇತೃತ್ವದ ಅಧ್ಯಕ್ಷ ಸಮಿತಿ ಆ ದಿನ ಅಸ್ತಿತ್ವದಲ್ಲಿರಲಿಲ್ಲವೇ? ಆವತ್ತು ಆ ಶಾಸಕರ ಕಮಿಟಿ ಅಸ್ತಿತ್ವದಲ್ಲಿರದಿದ್ದರೆ ಇವರು ಹೇಳುವುದು ಕರೆಕ್ಟ್, ಆ ದಿವಸ ಇತ್ತು ಎಂದು ನೀವು ಒಪ್ಪಿದ್ದೀರಿ.

ಅಧ್ಯಕ್ಷರು : ರೆಡ್ಡಿಯವರೇ, ಇದು ಒಂದು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಪ್ರಶ್ನೋತ್ತರ ಕಾಲದಲ್ಲಿ ದಯಮಾಡಿ ಸಾಧ್ಯವಿಲ್ಲ. ಇದು ಪಾಲಿಸಿ ಮ್ಯಾಟರ್ ಆಗಿದೆ. ನೀವೆಲ್ಲರೂ ಸಹ ಮಾತನಾಡಬೇಕಾದರೆ ಒಂದು ಚರ್ಚೆಗೆ ಅವಕಾಶ ಮಾಡಕೊಡೋಣ. ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡಿದರೆ ಹೇಗೆ? ಮುಂದೆ ಆ ಬಗ್ಗೆ ಚರ್ಚೆ ಮಾಡೋಣ, ಈಗ ಪ್ರಶ್ನೋತ್ತರ ನಡೆಸಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದು ಜಾರಿಗೆ ಬಂದದ್ದು ೧೦.೧೦.೨೦೦೬, ಇದನ್ನು ತೆಗೆದುಕೊಂಡಿದ್ದು ೧೬.೯.೨೦೦೫.

(ಗೊಂದಲ)

ಶ್ರೀ ಧರಂಸಿಂಗ್ : ನಾನು ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ಸ್ ಕೊಡುತ್ತೇನೆ, ಏನೇನು ಆಗಿದೆ ಎಂಬುದನ್ನು ಕೊಟ್ಟರೆ ಸಾಕು, ಅದಕ್ಕೆ ಸಮಯ ಬೇಕು, ಅರ್ಧಗಂಟೆಗಳ ಕಾಲ ಚರ್ಚೆಯಾಗಲಿ, ಇವತ್ತು ಜೀವಿಜಯ, ಬಸವರಾಜು ಎಲ್ಲರೂ ಕೂಡಿ ಪಕ್ಷ ಭೇದ ಮರೆತು ಇವತ್ತಿನ ದಿವಸ ಆ ಕೊಡಗು ಜಿಲ್ಲೆಯಲ್ಲಿ ಆದಂಥ ಕೆಲಸ ಕಾರ್ಯಗಳ ಬಗ್ಗೆ ಜಿಲ್ಲಾಧಿಕಾರಿಗಳ ಬಗ್ಗೆ ದೂರು ಕೊಡುತ್ತಿದ್ದಾರೆ, ಇವತ್ತು ಸ್ಪಷ್ಟವಾಗಿ ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವರು ಆದೇಶ ಕೊಟ್ಟು ಎಲ್ಲೆಲ್ಲಿ ಏನೇನು ತಪ್ಪಾಗಿದೆ ಅದನ್ನು ಸರಿಪಡಿಸಲು ಆದೇಶಿಸಬೇಕು.

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ಕೊಡಗು ಒಂದೇ ಅಲ್ಲ, ಮಲೆನಾಡು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲಿಯೂ ಮಳೆ ಜಾಸ್ತಿಯಾಗಿದೆ. ಕೊಡಗು ಒಂದೇ ಅಲ್ಲ, ಮಲೆನಾಡು, ಶಿವಮೊಗ್ಗ ಎಲ್ಲವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನೋಡಿ ನೀವು ವೆಲ್‌ನೊಳಗೆ ಬಂದು ಬಿಟ್ಟಿದ್ದೀರಿ, ಸುಮ್ಮನೆ ನಿಂತುಕೊಳ್ಳಿ, ಸಚಿವರು ಉತ್ತರ ಕೊಡುತ್ತಾರೆ.

ಮಾನ್ಯ ಸದಸ್ಯರು : ಅಧ್ಯಕ್ಷರೇ, ಆ ಭಾಗದ ಜನರೆಲ್ಲರ ಕಷ್ಟ ಅದು. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಎಲ್ಲರೂ ಹೀಗೆ ನಿಂತುಕೊಂಡು ಮಾತನಾಡಿದರೆ ಹೇಗೆ ? ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಆದರೆ ಉತ್ತರ ಕೊಡಿಸುವುದು ಹೇಗೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉಸ್ತುವಾರಿ ಸಚಿವರು ಇದರ ಬಗ್ಗೆ ಗಮನ ಕೊಡಬೇಕು, ಇದು ಸರಿಯಲ್ಲ, ಹಾಗಾಗಿ ನಾನು ಸಹ ಹೆಚ್.ಡಿ. ಬಸವರಾಜು ಅವರಿಗೆ ಬೆಂಬಲ ಕೊಡುತ್ತೇನೆ. (ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಬಾವಿಯೊಳಗೆ ಪ್ರವೇಶಿಸಿ ಧರಣಿ ನಿರತರಾದರು.)

ಶ್ರೀ ಬಿ.ಶಿವರಾಂ : ಹೀಗೆ ಆದರೆ ನಾವು ಧರಣಿ ಮಾಡಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಕಂದಾಯ ಸಚಿವರು ಉತ್ತರ ಕೊಡುತ್ತಾರೆ. ಜಗದೀಶ್ ಶೆಟ್ಟರ್‌ರವರೇ ದಯಮಾಡಿ ಉತ್ತರ ಕೊಡಿ. ಅನೇಕ ಕಡೆಗಳಲ್ಲಿ ಜಿಲ್ಲಾಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಕೆಲವು ಜಿಲ್ಲಾಧಿಕಾರಿಗಳಿಗೆ ಒಂದು ರೀತಿಯ ಸರ್ವಾಧಿಕಾರದ ಮನೋಭಾವ. ಇನ್ನು

ಕೆಲವು ಜಿಲ್ಲಾಧಿಕಾರಿಗಳಿಗೆ. ನಾನು ಒಂದು ಸಾರಿ ಮಾತನಾಡಿದ್ದೆ. ದಯಮಾಡಿ ಕೇಳಿ, ಈಗ ನೀವು ೧೦.೦೦ ಕೋಟಿ ರೂ. ಗಳನ್ನು ಕೊಡುತ್ತೀರಿ, ಆ ಹಣದಲ್ಲಿ ಆತನ ಕಮಿಷನ್ ಏನು ಎನ್ನುವುದೆಲ್ಲಾ ಆಗುತ್ತಿದೆ. ನಾಚಿಕೆಗೇಡಿನ ವಿಚಾರ, ಒಬ್ಬ Disrict Collector ರಿಂದ ಈ ರೀತಿಯೆಲ್ಲಾ ಆಗುತ್ತಿದೆ. ಜನ ಮಾತನಾಡುವುದನ್ನು ಕೇಳಿದರೆ ಅಸಹ್ಯವಾಗುತ್ತದೆ. ಆದ್ದರಿಂದ ನೀವು ಕಂದಾಯ ಸಚಿವರು ನಿಮ್ಮ ಜಿಲ್ಲಾಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಸೂಚನೆ ಕೊಡಬೇಕು ಮತ್ತು ಶಾಸಕರು ಕೇಳುತ್ತಿರುವಂತೆ ಅವರ ಕೆಲಸಗಳನ್ನು ಸರಿಯದ ರೀತಿಯಲ್ಲಿ ತೆಗೆದುಕೊಳ್ಳಬೇಕು. ನಿಮ್ಮ ಜಿಲ್ಲಾಧಿಕಾರಿಗಳು ಶಾಸಕರಿಗೆ ಸರಿಯಾದ ರೀತಿಯಲ್ಲಿ ಮಾನ್ಯತೆ ಕೊಟ್ಟು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಒಂದು ವೇಳೆ ಆ ಕೆಲಸ ಕಾರ್ಯಗಳೇನಾದರೂ ಆಗದೆ ಲೋಪವಾಗಿದ್ದರೆ ಶಾಸಕರು ಹೇಳಿದಂತೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡಿಸುವುದನ್ನು ಬಿಟ್ಟು ಅವರ ಇಷ್ಟ ಬಂದ ರೀತಿಯಲ್ಲಿ ಅವರು ಮಾಡುವುದು, ಇವರು ಇಷ್ಟ ಬಂದ ರೀತಿಯಲ್ಲಿ ಇವರು ಕೇಳುವುದು, ಏನು ವ್ಯವಸ್ಥೆ ಇದು. ಆಯಿತು, ಇದಕ್ಕೆ ಉತ್ತರ ಹೇಳಿ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬು, ಎಂ.ಟಿ. ಬಿ ನಾಗರಾಜು ಮತ್ತು ಶ್ರೀ ಜೆ. ನರಸಿಂಹಸ್ವಾಮಿಯವರು ಸದನದ ಬಾವಿಗಿಳಿದು ಧರಣಿ ನಿರತರಾಗಿದ್ದರು.)

ಶ್ರಿ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರು ಏನು ಸಲಹೆ ಸೂಚನೆಯನ್ನು ಕೊಟ್ಟಿದ್ದೀರಿ. particularly ಈ ಒಂದು ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಬಗ್ಗೆ ನಮ್ಮ ಸದಸ್ಯರುಗಳೇನು ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತು ಎಲ್ಲಿ ತಪ್ಪುಗಳಾಗಿವೆ, ಅಲ್ಲಿ ಶಾಸಕರನ್ನು ಕರೆದುಕೊಂಡು ಹೋಗಿ ಅವರ ಸಮಕ್ಷಮವೇ ಆ ತಪ್ಪುಗಳನ್ನು ಸರಿಮಾಡುವಂಥ ಕೆಲಸ ಹಾಗೂ ಬೇರೆ ಬೇರೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಏನು ತಪ್ಪುಗಳನ್ನು ಮಾಡಿದ್ದಾರೆ ಅದನ್ನು ಸರಿಪಡಿಸಲಿಕ್ಕೆ ತಾವು ಕೊಟ್ಟಿರುವ ಸಲಹೆ ಮೇರೆಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ನಾನು ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ಈಗ ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ, ಕಂದಾಯ ಸಚಿವರೊಂದಿಗೆ ತಾವೆಲ್ಲಾ ಕುಳಿತು ಮಾತನಾಡಿ ಸಚಿವರಿಗೆ ನಿಮ್ಮ ವಿವರಗಳನ್ನು ಕೊಟ್ಟು ಆ ತಪ್ಪುಗಳನ್ನು ಸರಿಪಡಿಸಲಿಕ್ಕೆ ಕಾಲಾವಕಾಶ ಕೊಡಿ, ಆಮೇಲೆ ಮುಂದಿನ ವಿಚಾರ.

ಈಗ ಶ್ರೀ ಎಂ.ಪಿ. ಕುಮಾರಸ್ವಾಮಿ ಪ್ರಶ್ನೆ ಕೇಳಿ,